**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.440/2018**

**ಸಿ.ಡಬ್ಲ್ಯೂ-5**

**ಪಿ.ಡಬ್ಲ್ಯೂ-3**

| | |
|---|---|
| ಸಾಕ್ಷಿಯ ಹೆಸರು | : ಶಿವಾನಂದ ಕೊಡತೆ |
| ತಂದೆ/ಗಂಡನ ಹೆಸರು | : ಸದಾಶಿವ |
| ವಯಸ್ಸು | : 56 ವರ್ಷ |
| ಉದ್ಯೋಗ | : ಅಬಕಾರಿ ಮುಖ್ಯ ಪೇದೆ |
| ವಾಸಸ್ಥಳ | : ಇಂಡಿ ವಲಯ |

**ದಿನಾಂಕ: 03-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನಾನು 2002 ರಿಂದ ಇಲ್ಲಿಯವರೆಗೆ ಅಬಕಾರಿ ಮುಖ್ಯ ಪೇದೆ ಅಂತಾ ಇಂಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ13.04.2017 ರಂದು ರಾತ್ರಿ 07.45 ಗಂಟೆಗೆ ಚಡಚಣ ಪಟ್ಟಣದಲ್ಲಿ ಗಸ್ತು ಮಾಡುತ್ತಿದ್ದಾಗ ಚಾಸಾ 1 ರವರಿಗೆ ಬಾತ್ಮಿ ಬಂದಿದ್ದು ಶಿರಾಡೋಣ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಒಬ್ಬ ವ್ಯಕ್ತಿಯು ದ್ವಿಚಕ್ರ ವಾಹನದ ಮೇಲೆ ಮಹಾರಾಷ್ಟ್ರ ರಾಜ್ಯದ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿದ್ದು ಆಗ ಅದನ್ನು ನನಗೆ ಹಾಗೂ ಚಾಸಾ 4 ರವರಿಗೆ ಸದರಿ ವಿಷಯವನ್ನು ತಿಳಿಸಿರುತ್ತಾರೆ. ನಂತರ ಅಲ್ಲೇ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಸ್ಥಳಿಯ ವ್ಯಕ್ತಿಗಳು ಪಂಚರಾಗಲು ನಿರಾಕರಿಸಿದರೆ ತಾವು ಪಂಚರಾಗಬೇಕೆಂದು ತಿಳಿಸಿದ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ನಾವು, ಚಾಸಾ 1 ರಿಂದ 4 ಎಲ್ಲರೂ ಸೇರಿ ಸರ್ಕಾರಿ ವಾಹನ ಸಂಖ್ಯೆ-ಕೆ.ಎ-28/ಜಿ-310 ರಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಸಮಯ ರಾತ್ರಿ 08.00 ಗಂಟೆಯಾಗಿತ್ತು. ಅಲ್ಲಿಯೇ ಶೋಧನಾ ವರದಿಯನ್ನು ಚಾಸಾ 1 ರವರು ತಯಾರಿಸಿರುತ್ತಾರೆ. ನಂತರ ಒಬ್ಬ ವ್ಯಕ್ತಿಯು ಏನೋ ಜನರಿಗೆ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ಅವನ ಹತ್ತಿರ ಹೋದಾಗ ಆತನು ವಾಹನ ಮತ್ತು ಮುದ್ದೆಮಾಲನ್ನು ಬಿಟ್ಟು ಪರಾರಿಯಗಲು

ಪ್ರಯತ್ನಿಸಿದ್ದು ಆಗ ನಾವು ಗೇರಾವು ಹಾಕಿ ಹಿಡಿದಿರುತ್ತೇವೆ. ನಂತರ ಆ ವ್ಯಕ್ತಿಗೆ ಏನು ಇದೆ ಎಂದು ವಿಚಾರಿಸಲಾಗಿ ದೇಸಿ ದಾರು ಸಂತ್ರಾ ಇದೆ ಎಂದು ತಿಳಿಸಿರುತ್ತಾನೆ. ನಂತರ ಆ ವ್ಯಕ್ತಿ ಹಾಗೂ ದ್ವಿಚಕ್ರ ವಾಹನ ಹಾಗೂ ಚೀಲವನ್ನು ಶೋಧಿಸಲು 180 ಎಮ್.ಎಲ್.ನ 25 ದೇಸಿ ದಾರು ಸಂತ್ರಾ ಬಾಟಲಿಗಳಿರುವುದು ಕಂಡುಬಂದಿರುತ್ತದೆ. ನಂತರ ದ್ವಿಚಕ್ರ ವಾಹನವನ್ನು ಶೋಧಿಸಲಾಗಿ ಅದರ ನೊಂದಣಿ ಸಂಖ್ಯೆ ಇರುವುದಿಲ್ಲ. ನಂತರ ಆ ವ್ಯಕ್ತಿಯ ಹೆಸರು ಕೇಳಿದಾಗ ಸಂತೋಷ ಚಂದ್ರಕಾಂತ ಮಾನೆ ಎಂದು ತಿಳಿಸಿರುತ್ತಾನೆ. ನಂತರ ಇವುಗಳನ್ನು ಎಲ್ಲಿಂದ ಮತ್ತು ಯಾಕೆ ತಂದಿರುವೆ ಎಂದು ಕೇಳಲಾಗಿ ಮಾರಾಟಕ್ಕಾಗಿ ತಂದಿರುತ್ತೇನೆಂದು ತಿಳಿಸಿರುತ್ತಾನೆ. ನಂತರ ಎಲ್ಲಾ ಮುದ್ದೆಮಾಲು ಹಾಗೂ ವ್ಯಕ್ತಿಯನ್ನು ಚಾಸಾ 1 ರವರು ವಶಕ್ಕೆ ತೆಗೆದುಕೊಂಡು ಜಪ್ತಾದ ಮುದ್ದೆಮಾಲಿನಿಂದ ಒಂದು ಬಾಟಲಿಯನ್ನು ರಾ.ಪ. ಕುರಿತು ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಶೀಲ್ ಮಾಡಲಾಯಿತು. ನಂತರ ಅವುಗಳಿಗೆ ಪಂಚರ ಹಾಗೂ ಚಾಸಾ 1 ರವರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ರಾತ್ರಿ 08.20 ರಿಂದ 09.00 ಗಂಟೆಯವರೆಗೆ ವಾಹನದ ಹೆಡ್ ಲೈಟ್ ಬೆಳಕಿನ ಸಹಾಯದಿಂದ ಮಾಡಿರುತ್ತಾರೆ. ನಂತರ ನಾನು ಈ ಕುರಿತು ದಿಃ15.05.2017 ರಂದು ಹೇಳಿಕೆಯನ್ನು ನೀಡಿರುತ್ತೇನೆ.

ಈ ಪ್ರಕರಣದ ಮುದ್ದೆಮಾಲನ್ನು ದಿಃ18.05.2017 ರಂದು ಸ್ಯಾಂಪಲ್ ಬಾಟಲಿ ಮತ್ತು ಅರ್ಜಿಯನ್ನು ಧಾರವಾಡ ರಾ.ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗುವಂತೆ ಆದೇಶಿಸಿದ್ದು ಆ ಕುರಿತು ನಾನು ದಿಃ19.05.2017 ರಂದು ಧಾರವಾಡದ ರಾ.ಪ್ರಯೋಗಾಲಯಕ್ಕೆ ಹೋಗಿರುತ್ತೇನೆ. ಸಂಜೆ 5 ಗಂಟೆಗೆ ವರದಿಯನ್ನು ನೀಡಿದ್ದು ನಾನು ಮರುದಿನ ಸದರಿ ವರದಿಯನ್ನು ಚಾಸಾ 7 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಡಿ.ಎಸ್.ಎಮ್. ವಕೀಲರಿಂದಃ**

ಬಾತ್ಮಿ ಸ್ಥಳ ಸಾರ್ವಜನಿಕ ಸ್ಥಳ ಎಂದರೆ ಸರಿ. ಸದರಿ ಸ್ಥಳದ ಅಕ್ಕಪಕ್ಕ ಮನೆಗಳು ಇರುತ್ತವೆ ಮತ್ತು ಅಲ್ಲಿ ಜನರು ತಿರುಗಾಡುತ್ತಾರೆ ಎಂದರೆ ಸರಿ. ನಾವು ಘಟನಾ ಸ್ಥಳದಲ್ಲಿ ಸ್ಥಳಿಯರನ್ನು ಪಂಚರಾಗಲು ಕೇಳಿದ್ದು ಆದರೆ ಅವರು ನಿರಾಕರಿಸಿರುತ್ತಾರೆ. ಚಾಸಾ 2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ನಾವು ಬಾತ್ಮಿಸ್ಥಳದಿಂದ 30 ರಿಂದ 40 ಮೀಟರ ದೂರ ನಿಂತು ವಾಚ್ ಮಾಡಿರುತ್ತೇವೆ. ಆಗ ಸಮಯ ರಾತ್ರಿ 8



ಗಂಟೆಯಾಗಿದ್ದರಿಂದ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸುತ್ತಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಲೈಟ್ ಬೆಳಕಿತ್ತು ಎಂದು ನುಡಿಯುತ್ತಾರೆ. ನಾನು ನಮ್ಮ ಮೇಲಾದಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲು

ಮಾಡಿರುವುದಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ರೈತ ಇರುವ ಕಾರಣ ಆತನು ಯಾವುದೇ ತಪ್ಪು ಮಾಡಿಲ್ಲದೇ ಇದ್ದರು ಸಹ ಆತನ ಮೇಲೆ ಈ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಯಾವುದೇ ರೇಡಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ13.04.2017 ರಂದು ಗಸ್ತು ಮಾಡುತ್ತಿದ್ದಾಗ ಬಾತ್ಮಿ ಬಂದಿದ್ದು ನಾವೆಲ್ಲರೂ ಬಾತ್ಮಿ ಸ್ಥಳಕ್ಕೆ ಹೋಗಿ ವಾಚ್ ಮಾಡಲಾಗಿ ಆರೋಪಿಯು ಸರಾಯಿ ಮಾರಾಟ ಮಾಡುತ್ತಿದ್ದುದನ್ನು ಖಚಿತಪಡಿಸಿಕೊಂಡು ಆತನಿಗೆ ಗೆರಾವು ಹಾಕಿ ಹಿಡಿದು ಪರಿಶೀಲನೆ ಮಾಡಲಾಗಿ ಆತನ ಹತ್ತಿರ ಸರಾಯಿ ಬಾಟಲಿಗಳು ಸಿಕ್ಕಿರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಪಂಚನಾಮೆಯನ್ನು ಮಾಡಿ ಪಂಚರ ಸಹಿ ಪಡೆದು ಸರ್ಕಾರದ ಪರವಾಗಿ ದೂರನ್ನು ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.440/2018**

**ಸಿ.ಡಬ್ಲ್ಯೂ-1**

**ಪಿ.ಡಬ್ಲ್ಯೂ-2**

| | |
|---|---|
| ಸಾಕ್ಷಿಯ ಹೆಸರು | : ಶರಣಗೌಡ ಬಿರಾದಾರ |
| ತಂದೆ/ಗಂಡನ ಹೆಸರು | : ಮಲ್ಲನಗೌಡ |
| ವಯಸ್ಸು | : 35 ವರ್ಷ |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಚಿತ್ತಾಪುರ ಉಪ ವಿಭಾಗ |

**ದಿನಾಂಕ:03-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನಾನು ದಿಃ07.11.2016 ರಿಂದ 23.11.2020 ರ ವರೆಗೆ ಅಬಕಾರಿ ಉಪ ನಿರೀಕ್ಷಕರು ಅಂತಾ ಇಂಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ13.04.2017 ರಂದು ರಾತ್ರಿ 07.45 ಗಂಟೆಗೆ ಚಡಚಣ ಪಟ್ಟಣದಲ್ಲಿ ಗಸ್ತು ಮಾಡುತ್ತಿದ್ದಾಗ ಶಿರಾಡೋಣ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಒಬ್ಬ ವ್ಯಕ್ತಿಯು ದ್ವಿಚಕ್ರ ವಾಹನದ ಮೇಲೆ ಮಹಾರಾಷ್ಟ್ರ ರಾಜ್ಯದ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿರುತ್ತದೆ. ಆಗ ನಾನು ಹಾಗೂ ಚಾಸಾ 4 ಮತ್ತು 5 ರವರಿಗೆ ಸದರಿ ವಿಷಯವನ್ನು ತಿಳಿಸಿರುತ್ತೇನೆ. ನಂತರ ನಾನು ಮತ್ತು ಸಿಬ್ಬಂದಿ ಕೂಡಿಕೊಂಡು ಚಡಚಣ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಸದರಿ ಬಾತ್ಮಿ ವಿಷಯವನ್ನು ಇಮ್ರಾನ ಅಗರಖೇಡ ಹಾಗೂ ಪ್ರಭು ಶಿರಶ್ಯಾಡ ಇವರಿಗೆ ತಿಳಿಸಿರುತ್ತೇನೆ. ಅದಕ್ಕೆ ಅವರು ಒಪ್ಪಿಕೊಂಡು ನಂತರ ಸರ್ಕಾರಿ ವಾಹನ ಸಂಖ್ಯೆ-ಕೆ.ಎ-28/ಜಿ-310 ದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಸಮಯ ರಾತ್ರಿ 07.50 ಗಂಟೆಯಾಗಿತ್ತು. ಸದರಿ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ದೂರದಿಂದ ಆ ವ್ಯಕ್ತಿಯನ್ನು ನೋಡಿ ಬಾಟಲಿಗಳನ್ನು ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿರುತ್ತೇವೆ. ನಂತರ ಆ ವ್ಯಕ್ತಿಯು ಪರಾರಿಯಾಗಲು ಪ್ರಯತ್ನಿಸಿದ್ದು ಆಗ ಸಿಬ್ಬಂದಿ ಹಾಗೂ ನಾವು ಗೇರಾವು ಹಾಕಿ

ಹಿಡಿದಿರುತ್ತೇವೆ. ನಂತರ ಆ ವ್ಯಕ್ತಿಗೆ ಏನು ಇದೆ ಎಂದು ವಿಚಾರಿಸಲಾಗಿ ದೇಸಿ ದಾರು ಸಂತ್ರಾ ಇದೆ ಎಂದು ತಿಳಿಸಿರುತ್ತಾನೆ. ನಂತರ ಆ ವ್ಯಕ್ತಿ ಹಾಗೂ ದ್ವಿಚಕ್ರ ವಾಹನ ಹಾಗೂ ಚೀಲವನ್ನು ಶೋಧಿಸಲು ಸ್ಥಳದಲ್ಲಿಯೇ ಶೋಧನಾ ವರದಿ ತಯಾರಿಸಿರುತ್ತೇನೆ. ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಲಾಗಿ 180 ಎಮ್.ಎಲ್.ನ 25 ದೇಸಿ ದಾರು ಸಂತ್ರಾ ಬಾಟಲಿಗಳಿರುವುದು ಕಂಡುಬಂದಿರುತ್ತದೆ. ಆಗ ಸಮಯ 08.20 ಗಂಟೆಯಾಗಿತ್ತು. ನಂತರ ದ್ವಿಚಕ್ರ ವಾಹನವನ್ನು ಶೋಧಿಸಲಾಗಿ ಟಿ.ವಿ.ಎಸ್. ಸ್ಟಾರ್ ಡಿಲಕ್ಸ ಕಂಪನಿ ಇರುವುದು ಕಂಡುಬಂದಿರುತ್ತದೆ. ಅದರ ನೊಂದಣಿ ಸಂಖ್ಯೆ ಇರುವುದಿಲ್ಲ. ನಂತರ ಆ ವ್ಯಕ್ತಿಯ ಹೆಸರು ಕೇಳಿದಾಗ ಸಂತೋಷ ಚಂದ್ರಕಾಂತ ಮಾನೆ ಎಂದು ತಿಳಿಸಿರುತ್ತಾನೆ. ನಂತರ ಇವುಗಳನ್ನು ಎಲ್ಲಿಂದ ಮತ್ತು ಯಾಕೆ ತಂದಿರುವೆ ಎಂದು ಕೇಳಲಾಗಿ ಮಾರಾಟಕ್ಕಾಗಿ ತಂದಿರುತ್ತೇನೆಂದು ತಿಳಿಸಿರುತ್ತಾನೆ. ನಂತರ ಎಲ್ಲಾ ಮುದ್ದೆಮಾಲು ಹಾಗೂ ವ್ಯಕ್ತಿಯನ್ನು ನಮ್ಮ ವಶಕ್ಕೆ ತೆಗೆದುಕೊಂಡು ಜಪ್ತಾದ ಮುದ್ದೆಮಾಲಿನಿಂದ ಒಂದು ಬಾಟಲಿಯನ್ನು ರಾ.ಪ. ಕುರಿತು ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಶೀಲ್ ಮಾಡಲಾಯಿತು. ನಂತರ ಅವುಗಳಿಗೆ ಪಂಚರ ಹಾಗೂ ನಮ್ಮ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿಯೇ ಮಾದರಿ ಮುದ್ರೆ ನಮೂನೆಯನ್ನು ತಯಾರಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ರಾತ್ರಿ 08.20 ರಿಂದ 09.00 ಗಂಟೆಯವರೆಗೆ ವಾಹನದ ಹೆಡ್ ಲೈಟ್ ಬೆಳಕಿನ ಸಹಾಯದಿಂದ ಮಾಡಿರುತ್ತೇವೆ. ನಂತರ ಮುದ್ದೆಮಾಲು ಹಾಗೂ ವ್ಯಕ್ತಿಯನ್ನು ಕಚೇರಿಗೆ ಬಂದು ಸದರಿ ವ್ಯಕ್ತಿಯ ವಿರುದ್ಧ ಗುನ್ನಾ ನಂ.145/2017 ರಂತೆ ಪ್ರಕರಣವನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವನ್ನು ಕಳುಹಿಸಿಕೊಟ್ಟಿರುತ್ತೇನೆ. ನಂತರ ಸದರಿ ಮುದ್ದೆಮಾಲನ್ನು ನಮ್ಮ ವಶದಲ್ಲಿಟ್ಟುಕೊಳ್ಳಲು ಪ್ರಾಧಿಕೃತ ಅಧಿಕಾರಿ ವಿಜಯಪುರ ಇವರಿಗೆ ಅರ್ಜಿ ಮಾಡಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ದಿಃ15.04.2017 ರಂದು ಚಾಸಾ 7 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಶೋಧನಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ಮಾದರಿ ಮುದ್ರೆ ನಮೂನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು, ನಿ.ಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಬಿ) ಎಂದು, ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು, ಸಾಕ್ಷಿಯು ಪ್ರ.ವ.ವನ್ನು



ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು, ಸಾಕ್ಷಿಯು ಅನುಮತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ನ್ಯಾಯಾಲಯದ ಮುಂದೆ ಇರುವ ಒಂದು ಸರಾಯಿ ಬಾಟಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಡಿ.ಎಸ್.ಎಮ್. ವಕೀಲರಿಂದಃ**

ಆ ದಿನ ಸಂಜೆ 6 ಗಂಟೆಯಿಂದ ಗಸ್ತು ಮಾಡುತ್ತಿದ್ದೇವು. ಬಾತ್ಮಿ ಸ್ಥಳಕ್ಕೆ ಹೋಗಲು 30 ರಿಂದ 35 ನಿಮಿಷ ತೆಗೆದುಕೊಂಡಿರುತ್ತೇವೆ. ಚಡಚಣದಿಂದ ಬಾತ್ಮಿ ಸ್ಥಳ 12 ರಿಂದ 13 ಕಿ.ಮೀ. ಇರುತ್ತದೆ. ಪಂಚರಿಗೆ ಲಿಖಿತವಾಗಿ ನೋಟಿಸ ನೀಡಿರುವುದಿಲ್ಲ. ಪಂಚರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ನಿ.ಪಿ.4 ರಲ್ಲಿ ಬಾತ್ಮಿ ಸ್ಥಳಕ್ಕೆ ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ ಎಂದು ಬರೆದಿರುವುದಿಲ್ಲ. ಬಾತ್ಮಿ ಸ್ಥಳವು ಸಾರ್ವಜನಿಕ ಸ್ಥಳ ಎಂದರೆ ಸರಿ. ಅಲ್ಲಿ ಸಾಕಷ್ಟು ಜನ ತಿರುಗಾಡುತ್ತಾರೆ ಮತ್ತು ಮನೆ ಇರುತ್ತವೆ ಎಂದರೆ ಸರಿ. ಸ್ಥಳಿಯರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ದ್ವಿಚಕ್ರ ವಾಹನ ಯಾರಿಗೆ ಸೇರಿರುತ್ತದೆ ಎಂದು ವಿಚಾರಣೆ ಮಾಡಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು 10 ಮೀಟರ ದೂರದಿಂದ ನಿಂತು ವಾಚ್ ಮಾಡಿರುತ್ತೇವೆ. ಆ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ಸರಿ. ಆಗ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣುತ್ತಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಲೈಟ್ ಬೆಳಕು ಇದ್ದ ಕಾರಣ ಕಾಣುತ್ತಿತ್ತು ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರು ಸಹ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಿಂದಲೋ ತಂದು ಆರೋಪಿಯು ಮಾರುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರು ಸಹ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ13.04.2017 ರಂದು ಗಸ್ತು ಮಾಡುತ್ತಿದ್ದಾಗ ಬಾತ್ಮಿ ಬಂದಿದ್ದು ನಾವೆಲ್ಲರೂ ಬಾತ್ಮಿ ಸ್ಥಳಕ್ಕೆ ಹೋಗಿ ವಾಚ್ ಮಾಡಲಾಗಿ ಆರೋಪಿಯು ಸರಾಯಿ ಮಾರಾಟ ಮಾಡುತ್ತಿದ್ದುದನ್ನು ಖಚಿತಪಡಿಸಿಕೊಂಡು ಆತನಿಗೆ ಗೆರಾವು ಹಾಕಿ ಹಿಡಿದು ಪರಿಶೀಲನೆ ಮಾಡಲಾಗಿ ಆತನ ಹತ್ತಿರ ಸರಾಯಿ ಬಾಟಲಿಗಳು ಸಿಕ್ಕಿರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಪಂಚನಾಮೆಯನ್ನು ಮಾಡಿ ಪಂಚರ ಸಹಿ ಪಡೆದು ಸರ್ಕಾರದ ಪರವಾಗಿ ದೂರನ್ನು ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ. ಸರಿ ಇದೆ

ಸಹಿ/-

ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.